Sri C. J. MUCKANNAPPA.—May I know Sir, whether the concerned file has been studied by the Hon'ble Parliamentary Secretary who gave the reply? Has he got any information?

Mr. SPEAKER.—It is disallowed.

ಶ್ರೀ ಬಿ. ಎಲ್. ಗೌಡ.—ಹೊಸದುರ್ಗ ತಾಲ್ಲೂಕಿನಲ್ಲಿ ಪಿ. ಡಬ್ಲ್ಯೂ. ಡಿ. ರಸ್ತೆ ಎಷ್ಟು ಮೈಲಿ ಆಗಿದೆ?

Mr. SPEAKER.—He has pleaded Notice. If the Hon'ble Member is not attentive, he has no right to take away the time of the others.

Co-operative Societies liquidated in Hosadurga Taluk.

*Q.—434.—Sri G. T. RANGAPPA (Hosadurga).—

Will the Government be pleased to state :—

(*a*) the number of Co-operative Societies liquidated in Hosadurga Taluk during the last three years ;

(*b*) out of them, the number of Societies that are still working even after liquidation ?

A.—Sri KONDAJJI BASAPPA (Deputy Minister for Co-operation). —

(*a*) Eight.

(*b*) Three.

ಶ್ರೀ ಜಿ. ಟಿ. ರಂಗಪ್ಪ.—(ಎ) ಪ್ರಶ್ನೆಗೆ ಉತ್ತರವಾಗಿ 8 ಸೊಸೈಟಿಗಳು ಎಂದು ಹೇಳಿದ್ದೀರಿ ಅವು ಯಾವ ಯಾವುವು?

ಶ್ರೀ ಕೊಂಡಜ್ಜಿ ಬಸಪ್ಪ.—ಶ್ರೀರಾಮಪುರ, ಬೆಳಗೂರು, ಚಿಕ್ಕಬ್ಯಾಲದ ಕೆರೆ, ಕುರುಬರ ಹಳ್ಳಿ.

ಶ್ರೀ ಜಿ. ಟಿ. ರಂಗಪ್ಪ.—ಲಿಕ್ವಿಡೇಷನ್ ಮಾಡುವ ಉದ್ದೇಶ ಏನು; ಅವುಗಳ ಪೈಕಿ ಮೂರಕ್ಕೆ ಕೆಲಸ ಮಾಡಲು ಏಕೆ ಅವಕಾಶ ಕೊಟ್ಟಿರಿ?

ಶ್ರೀ ಕೊಂಡಜ್ಜಿ ಬಸಪ್ಪ.—ಕೆಲಸ ಮಾಡುತ್ತವೆ ಎಂದರೆ Technically, these three Secretaries have not handed over records and accounts of these Societies to the liquidator who is appointed. So technically they are supposed to be working.

Sri C. J. MUCKANNAPPA.—May I know the reasons for liquidation of the Societies ?

Sri KONDAJJI BASAPPA.—Because they were defunct affairs were not good.

ಶ್ರೀ ಎಚ್.ಆರ್. ಕೇಶವಮೂರ್ತಿ.—ಈ ಮೂರು ಸೊಸೈಟಿಯಲ್ಲಿ ಎಷ್ಟು ಹಣತಿಂದು ಹಾಕಿದ್ದಾರೆ

ಶ್ರೀ ಕೊಂಡಜ್ಜಿ ಬಸಪ್ಪ.—ಆ ತಪಶೀಲು ಇಲ್ಲ. If you put a separate question, I will answer.

ಶ್ರೀ ಬಿ. ಬೈರಪ್ಪಾಜಿ.—ಲೆಕ್ಕಾಚಾರಗಳನ್ನು ಸರ್ಕಾರಕ್ಕೆ ಕೊಡದೇ ಇರತಕ್ಕ ಸೊಸೈಟಿಗಳು ಯಾವ ಯಾವುವು? ಮತ್ತು ಸೊಸೈಟಿಯಲ್ಲಿ ಚಪಾವಣಿಯಾಗಿರತಕ್ಕ ಹಣ ಎಷ್ಟು? ಅವರ ಮೇಲೆ ಏನು ಕಾರ್ಯಕ್ರಮ ಸರ್ಕಾರ ತೆಗೆದುಕೊಂಡಿದೆ?

ಶ್ರೀ ಕೊಂಡಜ್ಜಿ ಬಸಪ್ಪ.—ಮೂರು ಸೊಸೈಟಿಗಳು ಯಾವ ಯಾವುವು ಎಂದು ಕೇಳಿದರು ಅದಕ್ಕೆ ಉತ್ತರ ಹೇಳಿದ್ದೇನೆ. ಒಂದು ಶ್ರೀರಾಮಪುರ, ಇನ್ನೊಂದು ಬೆಳಗೂರು, ಮೂರನೆಯದು ಚಿಕ್ಕ ಬ್ಯಾಲದ ಕೆರೆ. ಇವುಗಳ ಪೈಕಿ ಚಿಕ್ಕಬ್ಯಾಲದ ಕೆರೆ ಸೊಸೈಟಿ ಸೆಕ್ರೆಟರಿಯವರು ಸತ್ತು

(ಶ್ರೀ ಕೊಂಡಜ್ಜಿ ಬಸಪ್ಪ)

ಹೋಗಿದ್ದಾರೆ ಆದ್ದರಿಂದ ಅಕೌಂಟ್ಸ್ ಟ್ರೇಸ್ ಮಾಡುವುದಕ್ಕೆ ಕಷ್ಟವಾಗಿದೆ. ಆ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಅಲ್ಲಿಯ ಪೈಸಿಡೆಂಟರು ಯಾರಿದ್ದಾರೆ ಅವರಿಗೆ ನೋಟೀಸ್ ಕೊಟ್ಟಿದೆ. ಮತ್ತು ಇನ್ನುಳಿದ ಎರಡು ಸೊಸೈಟಿಗಳ ಬಗ್ಗೆ ಶೀಘ್ರವಾಗಿ ಕ್ರಮತೆಗೆದುಕೊಳ್ಳಬೇಕೆಂದು ಕೋ-ಆಪರೇಟೀವ್ ಎಕ್ಸ್‌ಟೆಷನ್ ಆಫೀಸರಿಗೆ ತಿಳಿವಳಿಕೆ ಕೊಟ್ಟಿದೆ. ಎಷ್ಟು ಹಣ ದುರುಪಯೋಗವಾಗಿದೆ ಎನ್ನುವಕ್ಕೆ ಅಂಕಿಅಂಶ ಇಲ್ಲ.

ಶ್ರೀ ಅನ್ನದಾನಯ್ಯ.—ಈ ಸೊಸೈಟಿಗಳ ಡೀಫಂಕ್ಟ್ ಆಗಿ ಎಷ್ಟು ದಿವಸ ಆಯಿತು ? ಸೊಸೈಟಿ ಸೆಕ್ರೆಟರಿಯವರಿಂದ ಸಂಬಂಧಪಟ್ಟ ಲೆಕ್ಕಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಆಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. ಮೂರು ಸೊಸೈಟಿಗಳ ವಿಚಾರ ಹೇಳಿದೆ, ಬಾಕಿ ಸೊಸೈಟಿಗಳ ವಿಷಯದಲ್ಲಿ ಲಿಕ್ವಿಡೇಟರ್ಸ್ ಹೋಗಿ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುತ್ತಾ ಇದ್ದಾರೆ.

ಶ್ರೀ ಜಿ. ಟಿ. ರಂಗಪ್ಪ.—ಮೂರು ಸೊಸೈಟಿಗಳ ಕೆಲಸ ಮಾಡುತ್ತಾ ಇವೆ ಎಂದು ಹೇಳಿದ್ದೀರಿ. ಇವಕ್ಕೆ ಲಿಕ್ವಿಡೇಟರ್ಸ್‌ನ್ನು ನೇಮಕ ಮಾಡಿದ್ದು ಯಾವಾಗ ?

ಶ್ರೀ ಕೊಂಡಜ್ಜಿ ಬಸಪ್ಪ.—ಎಲ್ಲಕ್ಕೂ ಒಂದೇಸಾರಿ ಮಾಡಿದರು ಆದರೆ ಈ ಮೂರು ಸೊಸೈಟಿಗಳ ಕಾರ್ಯದರ್ಶಿಯವರು ಅಕೌಂಟ್ಸ್, ರೆಕಾರ್ಡ್ ಕೊಡದೆ ಇದ್ದುದರಿಂದ They are not working actually. But technically they are supposed to be working until records and accounts are handed over to the liquidator. ಆದ್ದರಿಂದ ಅವೂ ಕೂಡ ಸ್ವಾಭಾವಿಕವಾಗಿ ಕೆಲಸ ಮಾಡುತ್ತಿವೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಂಟು ಸೊಸೈಟಿಗಳ ಪೈಕಿ ಮೂರು ಸೊಸೈಟಿಗಳು ಕೆಲಸ ಮಾಡುತ್ತಾ ಇವೆ ಎಂದು ಹೇಳಿದರಿ. ಈ ಮೂರು ಸೊಸೈಟಿಗಳ ಪೈಕಿ ಒಂದು ಉಣ್ಣಿ ಸೊಸೈಟಿಯಲ್ಲಿ 30 ಸಾವಿರ ರೂಪಾಯಿ ಡಿಫಾಲ್ಕೇಷನ್ ಆಗಿದೆ ಆದರ ಸೆಕ್ರೆಟರಿ ಇನ್ನೂ ಚಾರ್ಜ್ ಕೊಟ್ಟಿಲ್ಲ ಅಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದರಲ್ಲಿ ಉಣ್ಣಿ ಸೊಸೈಟಿ ಯಾವುದು ಇಲ್ಲ ಎಂದು ಕಾಣುತ್ತದೆ.

Allotment of Overseas Wheat to the State.

*Q—204. Sri SIDDIAH KASHIMATH (Sirhatti).—

Will the Government be pleased to state :—

(*a*) the quota of Overseas Wheat allotted to the State from Avad Godowns ;

(*b*) whether the entire quantity has been lifted by the State ?

A.—Sri M. V. KRISHNAPPA (Minister for Revenue).—

(*a*) 20,000 tonnes.

(*b*) Yes.

ಶ್ರೀ ಸಿದ್ದಯ್ಯ ಕಾಶೀಮಠ್.—ಗೋಧಿಯನ್ನು ತರಲು ಮದರಾಸಿಗೆ ಹೋಗಿದ್ದ ರಾರಿಗಳಲ್ಲ ಕೆಲವರು ದಾರಿಯಲ್ಲೇ ಗೋಧಿಯನ್ನು ಮಾರಿಕೊಂಡು ಖಾಲಿ ರಾರಿಗಳನ್ನು ನಗರಕ್ಕೆ ತಂದರು ಎಂಬ ದೂರು ಸರ್ಕಾರಕ್ಕೆ ಬಂದಿದೆಯೇ ?